ಇ) ವಿಷಯ ಬೆಂಗಳೂರು ನಗರದಲ್ಲಿ Posters, Cutouts ಹಾಕುವುದನ್ನು ನಿಷೇಧಿಸುವ ಬಗ್ಗೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ವಿಧಾನಸೌಧದ ಸುತ್ತಮುತ್ತ ಮತ್ತು ಬೆಂಗಳೂರು ನಗರದಲ್ಲಿ posters, cut outs ಏನು ಹಾಕುತ್ತಾರೆ, ಅದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿದ್ದೇನೆ ಅದಕ್ಕೆ ಉತ್ತರವನ್ನು ಒದಗಿಸಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ತಕ್ಷಣ ಇಡೀ ಬೆಂಗಳೂರು ನಗರದಲ್ಲಿ cut outs ಹಾಕುವುದನ್ನು ನಿಷೇಧಿಸುತ್ತೇವೆ, ನಿಲ್ಲಿಸುತ್ತೇವೆಂದು ಹೇಳಿದ್ದರು ಆದರೆ, ಇವತ್ತಿನವರೆಗೂ ನಿಂತಿಲ್ಲ ನಾವು ಅನೇಕ ಸಂದರ್ಭಗಳಲ್ಲಿ ನೋಡಬಹುದು ಯಾರೋ ಒಬ್ಬ ವ್ಯಕ್ತಿ ಬೇಕಾದರೆ, ಅವನ ಫೋಟೋ ಹಾಕಿಕೊಳ್ಳಲಿ ಆದರೆ, cut outs ಹಾಕಿಕೊಳ್ಳುವಾಗ ಅದರಲ್ಲಿ ಮುಖ್ಯಮಂತ್ರಿಗಳ photo ಜೊತೆಯಲ್ಲಿ ಹಾಕಿಸಿಕೊಳ್ಳುವುದು, ಉಪಮುಖ್ಯಮಂತ್ರಿಗಳ photo ಜೊತೆಯಲ್ಲಿ ಇಡೀ ನಗರದಲ್ಲಿ ಹಾಕಿಕೊಳ್ಳುವಂಥಾದ್ದು ನಡೆದಿದೆ ಇನ್ನು ಹುಟ್ಟುಹಬ್ಬ ಅದು ಅವರವರ private affair ಎಂದು ನಾನು ತಿಳಿದಿದ್ದೇನೆ ಅದನ್ನು ಅವರವರ ಮನೆ-ಮನೆಗಳಲ್ಲಿ ಆಚರಿಸಿಕೊಳ್ಳಲಿ ಈಗ ವಿಧಾನಸೌಧದ ಸುತ್ತಮುತ್ತಲೂ ತಾವೇನು ಕಬ್ಬಿಣದ ಬೇಲಿ ಮಾಡಿಸಿಕೊಂಡಿದ್ದೀರಿ, ಅದು cut outs ಕಟ್ಟುವುದಕ್ಕೇ ಆಗಿಹೋಗಿದೆ!

ಶ್ರೀ ಜೆ ಸಿ ಮಾಧುಸ್ವಾಮಿ, ಅಲ್ಲಿರುವವರು ಯಾರಾದರೂ criminals, convict ಆಗಿದ್ದಲ್ಲಿ, ಆ ಮಂತ್ರಿಗಳ ಮೇಲೆ action ತೆಗೆದುಕೊಳ್ಳಬಹುದೇ ಎಂದು ಇಲ್ಲಿ ತೀರ್ಮಾನವಾಗಬೇಕು ಇದರ ಜೊತೆ cut outನಲ್ಲಿ ಹಾಕಿರುತ್ತಾರಲ್ಲ, ಅದರಲ್ಲಿ ಯಾರಾದರೂ criminals, convicts ಇದ್ದರೆ, ಯಾರ ಹೆಸರಿನಲ್ಲಿ ಅವರು cut outs ಮಾಡಸಿದ್ದಾರೋ, ಆ minister ಜವಾಬ್ದಾರರೆಂದು ಆಗುತ್ತಾರೋ ಇಲ್ಲವೇ ಎಂದು ಇಲ್ಲಿ ನಮಗೆ ಹೇಳಬೇಕು

ಶ್ರೀ ವಾಟಾಳ್ ನಾಗರಾಜ್ ಜನ್ಮ ದಿನಾಚರಣೆ ಹಾವಳಿಯನ್ನು ಮಾತ್ರ ತಡೆಯಲೇಬೇಕು ಅದೇನು ಜನ್ಮ ದಿನಾಚರಣೆ?

ಶ್ರೀ ಜೆ ಸಿ ಮಾಧುಸ್ವಾಮಿ ಇದಕ್ಕೆ ಉತ್ತರವನ್ನು ನೀವು ಕೊಡಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಈಗ ಎಲ್ಲಾ ತರಹದ posters ಬರುವುದಕ್ಕೆ ಶುರುವಾಗಿದೆ ಶಾಸಕರ ಭವನದ ಸುತ್ತಲೂ ಎಲ್ಲಾ ಜನರ posters ಇದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಭಾರೀ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ ದಯವಿಟ್ಟು ಈ ವಿಧಾನಸೌಧದ ಸುತ್ತಲೂ ಇರುವ

fencingಗೆ ಪೋಸ್ಟರ್ ಹಾಕುವುದನ್ನಾದರೂ ನಿಲ್ಲಿಸಿಬಿಡಿ ಅದೇನು ಆ ಫೋಟೋಗಳು! ಅವರು ಯಾರ್ಯಾರೋ? ಅವರ ಮುಖಗಳನ್ನು ನೋಡಿದರೆ ಹೆದರಿಕೆಯಾಗುತ್ತದೆ! ಅವರುಗಳ background ಏನೇನು ಎಂಬುದು ನಮಗೆ ಗೊತ್ತಿಲ್ಲ

ಅಧ್ಯಕ್ಷರು ಅವರ ಮುಖಗಳನ್ನು ನೋಡಿ ನಿಮಗೆ ಹೆದರಿಕೆಯಾದರೆ ಹೇಗೆ? ಇಷ್ಟು ಹೆದರಿಬಿಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ ಇನ್ನೊಂದು ನೀವು ನೋಡಬೇಕು ಬ್ರಹ್ಮ, ವಿಷ್ಣು, ಮಹೇಶ್ವರ, ಈ ಮೂವರು ಒಬ್ಬರಿಗೆ ಆಶೀರ್ವಾದ ಮಾಡುತ್ತಿದ್ದಾರೆ! ಇದನ್ನು ನಾನು ಎಲ್ಲಿಯೂ ನೋಡಿಲ್ಲ, ಬ್ರಹ್ಮ, ವಿಷ್ಣು, ಮಹೇಶ್ವರರಾದ ಈ ಮೂವರು ಕೆಳಗಡೆ ಇರುವವರಿಗೆ ಮೇಲಿನಿಂದ ಹೂಗಳನ್ನು ಸುರಿಸುತ್ತಿದ್ದಾರೆ ಇದೇನು ಹುಡುಗಾಟ? ಯಾರದು ಜನ್ಮ ದಿನಾಚರಣೆ? ಮಹಾತ್ಮಗಾಂಧಿಯ ಜನ್ಮ ದಿನಾಚರಣೆ ಇಲ್ಲ, ಅಂಬೇಡ್ಕರ್‌ರವರ ಜನ್ಮ ದಿನಾಚರಣೆ ಇಲ್ಲ, ಯಾರದ್ದೂ ಇಲ್ಲ ಹಾದಿ–ಬೀದಿಗಳಲ್ಲಿ ಏನಿದು ವಿಚಿತ್ರ? ಏನಿದು ಹುಡುಗಾಟ? ಇದು ಸರಿಯಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಈ ರೋಗ ಇಲ್ಲಿಗೇ ನಿಂತಿಲ್ಲ ಈಗ ಹಳ್ಳಿ ಹಳ್ಳಿಗೂ ಈ ಕಾಯಿಲೆ ಬಂದುಬಿಟ್ಟಿದೆ ಅಪಾಯವೇನೆಂದರೆ, anti-social elements

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ನೀವೇ ಎಲ್ಲರನ್ನೂ ಎಳೆದುಕೊಂಡು ಬರುತ್ತಿದ್ದೀರಿ ಬೆಂಗಳೂರು ತನಕ ಬರೆಸಿಕೊಂಡು ಬಂದದ್ದು ನೀವೇ ರವಿ ಮೇಲ್ಪಂಕ್ತಿ ಹಾಕಿಕೊಟ್ಟವರು ಅವರಲ್ಲ, ತಾವು ಇವರೇ ಮೇಲ್ಪಂಕ್ತಿ ಹಾಕಿಕೊಟ್ಟವರು ಬೆಂಗಳೂರಿಗೆ ಯಾರೂನಡೆಯುವುದೇ ಇಲ್ಲವೇ?

ಶ್ರೀ ಕೆ ಆರ್ ರಮೇಶ್‌ಕುಮಾರ್ ಈಗ ಯಾರು ಹಿರಿಯರೋ, ಯಾರು ಕಿರಿಯರೋ ಗೊತ್ತಿಲ್ಲ, ರವಿಯವರೆ, ಸಾರ್ವಜನಿಕ ಜೀವನದಲ್ಲಿರುವವರು, ರಾಜಕಾರಣಿಗಳು, ಅಂದರೆ, ನಾವು ನಗೆಪಾಟಲಿನ ವಸ್ತುವಾಗಿದ್ದೇವೆ ಬಹಳ ಲಘುವಾಗಿ, ಅಸಹ್ಯವಾಗಿ ನಮ್ಮ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ ಇದು ಹಳ್ಳಿಗಳಲ್ಲೆಲ್ಲಾ ಪ್ರಾರಂಭವಾಗಿ ಬಿಟ್ಟಿದೆ ನಮಗೇ ಗೊತ್ತಿರುವುದಿಲ್ಲ ನಮ್ಮ ಊರಿನಲ್ಲಿ ನನ್ನನ್ನೂ ಸೇರಿಸಿ ಹಾಕಿಬಿಟ್ಟಿದ್ದರು ನಾನು ನಮ್ಮ Sub Inspectorಗೆ ಫೋನ್ ಮಾಡಿ ಹೇಳಬೇಕಾಯಿತು 'ನೋಡಿ ನನ್ನ ಅನುಮತಿ ಇಲ್ಲದೆ ಹಾಕಿದ್ದಾರೆ, ತಕ್ಷಣ ತೆಗೆಸಿ' ಎಂದು ಹೇಳಬೇಕಾಯಿತು Sub Inspectorರವರ ಸಹಾಯ ತೆಗೆದುಕೊಂಡು ನಾನು ಅದನ್ನು ನಿಲ್ಲಿಸಬೇಕಾಯಿತು ನಮ್ಮ ಫೋಟೋವನ್ನೇ ಹಾಕಿಬಿಡುತ್ತಾರೆ ಯಾರ್ಯಾರ ಜೊತೆಗೋ ಹಾಕಿಬಿಡುವುದು! ಅಧ್ಯಕ್ಷರೆ, ಇದು ತೀರಾ ಅಗೌರವ ಎಲ್ಲೋ ಒಂದು ಕಡೆ ಒಂದು ಸಣ್ಣ ಶಾಸನವಾದರೂ ಮಾಡಬೇಕು

ಭೂಮಿ ಕದ್ದವರು illicit liquor ಮಾರುವವರೂ smuggling ಮಾಡುವವರೂ ಅಲ್ಲೇ, ಶುದ್ಧ characterless fellows ಎಲ್ಲರೂ ಅವರೇ ಈ ರಾಜ್ಯದ ಮುಖ್ಯಮಂತ್ರಿ ಫೋಟೋ, ಪ್ರಧಾನಮಂತ್ರಿ ಫೋಟೋ, ಮಾಜಿ ಪ್ರಧಾನಮಂತ್ರಿ ಫೋಟೋ, ರಾಷ್ಟ್ರಪತಿ ಫೋಟೋ, ಉಪ ರಾಷ್ಟ್ರಪತಿ ಫೋಟೋ ನಾನು ಏನು ಹೇಳುತ್ತೇನೆಂದರೆ, ಆ ಸ್ಥಾನಗಳಿಗೆ ತನ್ನದೇ ಆದ ಗೌರವವಿದೆ ಇವರು ಯಾರ permission ತೆಗೆದುಕೊಂಡು ಹಾಕುತ್ತಾರೆ? ಇವರನ್ನು ಯಾರು ಕೇಳುತ್ತಾರೆ? ಎಲ್ಲಿ ನೋಡಿದರೂ ಇದೊಂದು ತರಹ ಅಸಹ್ಯವೆಂದರೆ ಅಸಹ್ಯ This is very bad ಯಾರು ಕೆಲವು ಸ್ಥಾನಗಳಲ್ಲಿರುತ್ತಾರೆ ಇಂಥವರ permission ಇಲ್ಲದೇಯೆ ಅಥವಾ ಆ ಸಂಸ್ಥೆಯಿಂದ, C M 's office ನಿಂದ permission ಇಲ್ಲದೆಯೇ C M photoವನ್ನು use ಮಾಡತಕ್ಕದ್ದು, it is forbidden under law ನಾವು strict ಆಗಿ ಹೋಗಬೇಕಗುತ್ತದೆ ಇಲ್ಲವಿದ್ದರೆ ಸಂಸ್ಥೆಗಳ ಗೌರವವೇನಾಗುತ್ತದೆ? it is very bad ನಾವು ಇದನ್ನೇನೋ ಲಘುವಾಗಿ ಮಾತನಾಡಿದ್ದೇವೆಂದು ಹಾಸ್ಯ ಮಾಡಿಕೊಂಡು ಹೋಗತಕ್ಕದ್ದಲ್ಲ ನಾವು ಸಾರ್ವಜನಿಕ ಜೀವನಕ್ಕೆ ಬಂದಿದ್ದಕ್ಕೆ ಈಗಾಗಲೇ ನರಳುತ್ತಿದ್ದೇವೆ ಈಗ ನಾವೇನು ಹೆಮ್ಮೆಯಿಂದ ಗೌರವದಿಂದ, ತೃಪ್ತಿಯಿಂದ ಬದುಕತಕ್ಕ ಮನುಷ್ಯರಾಗಿಲ್ಲ ಈಗಾಗಲೇ ಇದೊಂದು ರೀತಿಯ ಶಾಪ ಕೆಸರಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ ಓಡಿಹೋಗುವಂತಿಲ್ಲ, ಈ ಕಾಲನ್ನು ತೆಗೆದರೆ ಆ ಕಾಲು ಸಿಕ್ಕಿಹಾಕಿಕೊಳ್ಳುತ್ತದೆ, ಆ ಕಾಲನ್ನು ತೆಗೆದರೆ ಈ ಕಾಲು ಸಿಕ್ಕಿಹಾಕಿಕೊಳ್ಳುತ್ತದೆ ಬೇರೆ ಯಾವುದೇ ಕ್ಷೇತ್ರದಲ್ಲಿದ್ದು ಊರೆಲ್ಲಾ ಹಲ್ಕಾ ಕೆಲಸ ಮಾಡಿದ್ದರೂ ನೀವು ದೊಡ್ಡ ಮನುಷ್ಯರು ಆದರೆ, ಇಲ್ಲಿದ್ದು ನೀವು ಎಷ್ಟೇ ಗೌರವದಿಂದಿದ್ದರೂ ನೀವು ಶುದ್ಧ ಹಲ್ಕಾಗಳು ಇಡೀ ಸಮಾಜವೇ ಆ ರೀತಿಯಾಗಿದೆ ಅದರ ಜೊತೆಗೆ ಆ ಕರ್ಮಗಳೆಲ್ಲಾ ನಮಗೇ ಬೀಳುತ್ತಿವೆ ದಯಮಾಡಿ, I think you should take a strict view about it

ಶ್ರಿ ಹೆಚ್ ಡಿ ಕುಮಾರಸ್ವಾಮಿ(ಮುಖ್ಯಮಂತ್ರಿಗಳು) – ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇನು ಪ್ರಸ್ತಾಪ ಮಾಡಿದ್ದಾರೆ, ಅವರು ಮೊನ್ನೆ ಬೇರೆ ಬೇರೆ ರೀತಿಯ ಬೋರ್ಡ್‌ಗಳನ್ನು ಹಾಕುವುದರ ಮೂಲಕ ನಗರದಲ್ಲಿರುವ ವ್ಯವಸ್ಥೆಗೆ ಕೆಟ್ಟ ಅಭಿಪ್ರಾಯ ಮೂಡಿಸಿರುವ ವಿಷಯದ ಬಗ್ಗೆ ನನ್ನ ಗಮನಕ್ಕೆ ತಂದ ತಕ್ಷಣವೇ, 24 ಗಂಟೆಯಲ್ಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ನನ್ನ photo ಇರತಕ್ಕದನ್ನು ತಕ್ಷಣ ತೆಗೆಯಬೇಕೆಂದು direction ಕೊಟ್ಟು, ಪ್ರಮುಖವಾಗಿ ವಿಧಾನಸೌಧವಿರಬಹುದು, ನನ್ನ ಗೃಹವಿರತಕ್ಕ ರಸ್ತೆ ಇರಬಹುದು, ಅಲ್ಲಿರುವ ಎಲ್ಲಾ cutoutಗಳನ್ನು ತೆಗೆಯಲು ಆದೇಶ ಕೊಟ್ಟು 24ಗಂಟೆಯಲ್ಲೆ ತೆಗೆಸಿದ್ದೇನೆ ಈ ವಿಷಯದಲ್ಲಿ ಕಾನೂನನ್ನು ತರುವುದು ಸೂಕ್ತವೆಂದು ಕೆಲವು ಸದಸ್ಯರೇನು

ಹೇಳುತ್ತಿದ್ದಾರೆ ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ ಏಕೆಂದರೆ, ಮುಖ್ಯಮಂತ್ರಿಯಾದ ಸಂದರ್ಭದಲ್ಲೇ ನಾನು ಸಾರ್ವಜನಿಕವಾಗಿ ಹೇಳಿಕೆಯನ್ನು ಕೊಟ್ಟಿದ್ದೆ ಯಾವುದೇ ಕಾರಣಕ್ಕೂ ನಮ್ಮ ಚಿತ್ರಗಳನ್ನು ಹಾಕುವುದರ ಮೂಲಕ ನಗರದ ಅಂದವನ್ನು ಕೆಡಿಸಬಾರದೆಂದು ಮನವಿಯನ್ನು ಮಾಡಿದ್ದೆ ಈ ವಿಷಯದಲ್ಲಿ ಹೊಸ ಕಾನೂನೊಂದನ್ನು ತರುವುದಕ್ಕೆ ನಾನೂ ನಿಮ್ಮ ಜೊತೆ ಸಹಮತವನ್ನು ವ್ಯಕ್ತಪಡಿಸುತ್ತೇನೆ ಅದರ ಜೊತೆಗೆ ಇದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಜವಾಬ್ದಾರಿ ಸಹ ಇದೆ ಏಕೆಂದರೆ, ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಅವರ ಪಕ್ಷದ ಕಾರ್ಯಕರ್ತರಿಗೆ ಕಟ್ಟುನಿಟ್ಟಿನ ಆದೇಶವನ್ನೂ ಕೊಡಬೇಕಾಗುತ್ತದೆ ನಾವು ಕೇವಲ ವೇದಿಕೆ ಮೇಲೆ ಇಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಆಗುವುದಿಲ್ಲ ಆದರೆ, ಸರ್ಕಾರದಿಂದ ಕಾನೂನನ್ನು ತರಬೇಕೆಂದು ಸದನ ಬಯಸುವುದಾದರೆ ಅಂತಹ ಕಾನೂನು ತರುವ ಬಗ್ಗೆ ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತೇವೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇದನ್ನು ಇಡೀ ರಾಜ್ಯದಲ್ಲಿ ತರಬೇಕಾಗುತ್ತದೆ ಕೇವಲ ಬೆಂಗಳೂರು ನಗರ ಒಂದಕ್ಕೆ ಅಲ್ಲ

ಈ) ವಿಷಯ ಹೊಸ ಜಿಲ್ಲೆಗಳ ರಚನೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡುತ್ತೀರೆಂದು ಅನೇಕ ಪತ್ರಿಕೆಗಳಲ್ಲಿ ಬಂದಿದೆ ಹೊಸ ಜಿಲ್ಲೆಗಳನ್ನು ಮಾಡುವುದಕ್ಕೆ ನನ್ನದೇನೂ ತಕರಾರಿಲ್ಲ ಅದರೆ, ಬೆಳಗಾವಿ ಜಿಲ್ಲೆಯನ್ನು ಮಾತ್ರ ಒಡೆಯತಕ್ಕ ಕಾರ್ಯಕ್ಕೆ ಕೈ ಹಾಕಬಾರದು ಏಕೆಂದರೆ ಅದು ಬಹಳ ಪ್ರಾಮುಖ ಹಾಗು ಸೂಕ್ಷ್ಮವಾದ ವಿಚಾರ ಮಹಾಜನ್ ವರದಿ ಜಾರಿಯಾಗಬೇಕಾಗಿರುವುದರಿಂದ ಅದರ ಬಗ್ಗೆ ನಾವೆಲ್ಲರೂ ಒಗ್ಗಟ್ಟಾಗಿಯೇ ಬಂದಿದ್ದೇವೆ ಬೇರೆ ಯಾವ ಜಿಲ್ಲೆಗಳನ್ನು ಮಾಡುತ್ತೇನೆಂದು ಹೇಳಿದ್ದಿರೋ ಅದು ನಿಮಗೆ ಸೇರಿದ್ದು ಅದಕ್ಕೆ ನನ್ನ ತಕರಾರೇನಿಲ್ಲ ಅದನ್ನು ಮಾಡಬೇಡಿ, ಮಾಡಿ ಎಂದು ನಾನು ಹೇಳುವುದಿಲ್ಲ ಆದರೆ, ಆ ವಿಚಾರದಲ್ಲಿ ಬೆಳಗಾವಿಯ ಪ್ರಶ್ನೆ ಬಂದಾಗ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ ಈ ವಿಚಾರದಲ್ಲಿ ಮಾತ್ರ ಸ್ಪಷ್ಟವಾಗಿ ಮತ್ತು ನೇರವಾಗಿ ಚಿಂತನೆ ಮಾಡಬೇಕಾಗುತ್ತದೆ ಇದರ ಬಗ್ಗೆ ಬಂದಾಗ ವಿರೋಧ ಪಕ್ಷದ ಎಲ್ಲಾ ಮುಖಂಡರನ್ನು ಕರೆದು ಮಾತನಾಡಬೇಕು ಬೆಳಗಾವಿ ಪ್ರಶ್ನೆಯ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕಾಗುತ್ತದೆ ಅತ್ಯಂತ ಗಂಭೀರವಾದ ಪರಿಸ್ಥಿತಿ ಇದೆ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ದಯಮಾಡಿ ಒಂದು ತೀರ್ಮಾನಕ್ಕೆ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ತಾವೇನು ಹೇಳುತ್ತಿರೋ ಹೇಳಬೇಕಾಗಿ ಕೋರುತ್ತೇನೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ(ಗುರುಮಿರಕಲ್) Particularly, ಗುಲ್ಬರ್ಗಾ ಮತ್ತು ಬೆಳಗಾಂ ಬಗ್ಗೆ District Reorganization Committeeಗೇ